

ತಿಥಿ ಚಿತ್ರದ ಒಂದು ದೃಶ್ಯ

## ಕಲೆಯ ಧ್ಯಾನ.. ತಂತ್ರಜ್ಞಾನದ ತ್ರಾಣ

**23ನೇ ಪುಟದಿಂದ**

ಪಾತ್ರಕ್ಕೆ ಸಿದ್ಧರಾಗಿ ಬಂದಿದ್ದೀರಿ?' ಎಂದು ಕೇಳಿದೆ. ಅವರು 'ಯಾವುದನ್ನು ಬೇಕಾದ್ರೂ ಚಿತ್ರೀಕರಣ ಮಾಡಲಿ. ನಾನು ಸಿದ್ಧನಾಗಿದ್ದೇನೆ' ಎಂದರು. ಎರಡೂ ಪಾತ್ರಗಳ ಐದು ಪುಟಗಳ ಸಂಭಾಷಣೆಗಳನ್ನು ಅವರು ಬಾಯಿಪಾಠ ಮಾಡಿಕೊಂಡು, ಎರಡೂ ಪಾತ್ರಗಳು ಹೇಗೆ ಅಭಿನಯಿಸಬೇಕು, ಯಾವ ಭಾವವನ್ನು ವ್ಯಕ್ತಪಡಿಸಬೇಕು ಎಂಬುದನ್ನು ಮನಸಲ್ಲಿಯೇ ತಾಲೀಮು ಮಾಡಿಕೊಂಡು ಬಂದಿದ್ದರು! ಆಗ ಅಲ್ಲಿ ಅರ್ಜುನನ ಸಂಭಾಷಣೆಗಳನ್ನು ಚಿತ್ರೀಕರಿಸುವಾಗ ಎದುರಿಗೆ ಬಬ್ರುವಾಹನನ ಸ್ಥಾನದಲ್ಲಿ ಅವರಿಗೆ ಭಾವಾಭಿವ್ಯಕ್ತಿಗೆ ಅನುಕೂಲ ಆಗಲಿ ಎಂದು ನಾನು ನಿಂತಿರುತ್ತಿದ್ದೆ.

ಅಂದು ಇಷ್ಟೆಲ್ಲ ಕಷ್ಟಪಟ್ಟು ಸಿನಿಮಾ ಮಾಡುತ್ತಿದ್ದೆವು. ಇಂದು ಅಂಥ ಸಂಕಷ್ಟಗಳೆಲ್ಲ ಇಲ್ಲ. ಎರಡು ಪಾತ್ರಗಳ ದೃಶ್ಯಗಳನ್ನು ಚಿತ್ರೀಕರಿಸಿಕೊಂಡು ನಂತರ ಅವರ ಹಿನ್ನೆಲೆ ದೃಶ್ಯಗಳನ್ನು ಜೋಡಿಸಿಬಿಡಬಹುದು. ಇಂದು ಯಾವ ನಾಯಕನಟ ನಾಳೆ ಚಿತ್ರೀಕರಿಸುವ ದೃಶ್ಯಗಳ ಸಂಭಾಷಣೆಗಳನ್ನು ಕೇಳಿ ಪಡೆದುಕೊಂಡು ಮನೆಗೆ ಕೊಂಡೊಯ್ದು ತಾಲೀಮು ಮಾಡಿಕೊಂಡು ಬರುತ್ತಾನೆ?

ಸಿನಿಮಾ ನಿರ್ದೇಶಕನ ಕಲ್ಪನೆ. ಅವನ ಕಲ್ಪನೆ ಮತ್ತು ಸೃಜನಶೀಲ ಕೃಷಿ ಎರಡೂ ಸೇರಿದಾಗ ಮಾತ್ರ ಒಳ್ಳೆಯ ಸಿನಿಮಾ ರೂಪುಗೊಳ್ಳಲು ಸಾಧ್ಯ. ಈ ಎರಡೂ ಸೇರಿ ಆದ ಒಂದು ಒಳ್ಳೆಯ ಸಿನಿಮಾ 'ಬೂತಯ್ಯನ ಮಗ ಅಯ್ಯು'. ಸಿದ್ದಲಿಂಗಯ್ಯ ಅವರು ನಿರ್ದೇಶಿಸಿದ ಈ ಸಿನಿಮಾ ಇಂದಿನ ಆಧುನಿಕ ತಂತ್ರಜ್ಞಾನ ಯುಗಕ್ಕೆ ಹೋಲಿಸಿದರೂ ಬೆಸ್ಟ್ ಸಿನಿಮಾ. ಆ ಸಿನಿಮಾಕ್ಕೂ ನಾನು ಕೆಲಸ ಮಾಡಿದ್ದೇನೆ.

ಆ ಸಿನಿಮಾದಲ್ಲಿ ಎಲ್ಲವನ್ನೂ ಚಿತ್ರೀಕರಣ ಮಾಡಿರುವುದೇ ಹೊರತು ಗ್ರಾಫಿಕ್ಸ್ ಇಲ್ಲವೇ ಇಲ್ಲ. ಡ್ಯಾಮ್ ಒಡೆಯುವ ಒಂದು ದೃಶ್ಯ ಮಾತ್ರ ಕೃತಕವಾಗಿ ಸೃಷ್ಟಿಸಿದ್ದು. ಅದಕ್ಕಾಗಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಒಂದು ಅಣೆಕಟ್ಟೆನ ಮಿನಿಯೇಚರ್ ಕಟ್ಟಿದ್ದೆವು. ಅದನ್ನು ಬಾಂಬ್ ಇಟ್ಟು ಸ್ಫೋಟಿಸಿದೆವು. ಅದು ಒಡೆದು ನೀರು ಕೋಡಿ ಹರಿದುಕೊಂಡು ಬರುವ ದೃಶ್ಯ ಮಾತ್ರ ಕೃತಕವಾಗಿ ಸೃಷ್ಟಿಸಿದ್ದು.

ಆ ಡ್ಯಾಮ್‌ನಲ್ಲಿ ಬುಳುಕ್ ಬುಳುಕ್ ಎಂದು ನೀರು ಬರುತ್ತಿರುತ್ತದೆ. ಸ್ವಲ್ಪ ಹೊತ್ತಾದ ಮೇಲೆ ಜುಳುಜುಳು ಎಂದು ಜೋರು ಹರಿಯಲು ಶುರುವಾಗುತ್ತದೆ. ನಂತರ ಒಡೆದುಹೋಗುತ್ತದೆ. ಈ ಎಲ್ಲವನ್ನೂ ತುಂಬ ಕಷ್ಟಪಟ್ಟು ಚಿತ್ರೀಕರಿಸಿದ್ದೇವೆ.

ಗೊರೂರು ರಾಮಸ್ವಾಮಿ ಅಯ್ಯಂಗಾರರ 'ವೈಯಾರಿ' ಎನ್ನುವ ಕಥಾಸಂಕಲನದಿಂದ ಆಯ್ಕೆ ಮಾಡಿದ ಮೂರು ಪುಟಗಳ ಕತೆ ಅದು. ಅದನ್ನು ಸಿನಿಮಾ ಆಗಿ ಬೆಳೆಸುವಲ್ಲಿ ನಿರ್ದೇಶಕರ ಕೃಷಿ ದೊಡ್ಡದು. ಸಿದ್ದಲಿಂಗಯ್ಯನವರು, ವರದಪ್ಪನವರು, ವೀರಾಸ್ವಾಮಿ ಎಲ್ಲರೂ ಸೇರಿಕೊಂಡು ಮಾಡಿದ ಸಿನಿಮಾ ಅದು. ಅಲ್ಲೊಂದು ಟೀಂ ವರ್ಕ್ ಇತ್ತು.

ತೆಲುಗಿನವರು ಪುರಾಣಪಾತ್ರಗಳನ್ನು ಇಟ್ಟುಕೊಂಡು ಬಹಳಷ್ಟು ದೊಡ್ಡ ಸಿನಿಮಾಗಳನ್ನು ಮಾಡಿದ್ದಾರೆ. ಆದರೆ ನಮ್ಮಲ್ಲಿ ಅಂತಹ ಸಿನಿಮಾಗಳನ್ನು ಮಾಡುವುದು ಸಾಧ್ಯವೆ? ಅಲ್ಲಿರುವ ದೃಶ್ಯಗಳು ವಾಸ್ತವವಾಗಿ ಅಸಾಧ್ಯ ಎನ್ನುವುದು ನಮಗೂ ಗೊತ್ತು. ಆದರೆ ಅಲ್ಲಿನ ದೃಶ್ಯವೈಭವಗಳನ್ನು ನೋಡಿ ನಾವು ಮೈಮರೆತತು ಬಿಡುತ್ತೇವೆ. ಅದೂ ಒಂದು ರೀತಿಯಲ್ಲಿ ನಿರ್ದೇಶಕನ ಸೃಜನಶೀಲ ಶಕ್ತಿಯೇ.

ಇಂದು ನಮ್ಮಲ್ಲೂ ಒಳ್ಳೊಳ್ಳೆಯ ಕಥಾವಸ್ತುಗಳನ್ನು ಇಟ್ಟುಕೊಂಡ ಸಿನಿಮಾಗಳು ಬರುತ್ತಿವೆ. ಸುಧಾರಿಸಿದ ಕಥಾವಸ್ತುಗಳಿಗೆ ಇತ್ತೀಚಿನ ಒಂದು ಒಳ್ಳೆಯ ಉದಾಹರಣೆ 'ಒಂದು ಮೊಟ್ಟೆಯ ಕಥೆ'. ಇಂದು ನಿರ್ಮಾಪಕ ಮುನಿರತ್ನ ಅವರು 'ಕುರುಕ್ಷೇತ್ರ' ಸಿನಿಮಾ ಮಾಡುತ್ತಿರುವುದೂ ಕನ್ನಡ ಸಿನಿಮಾದಲ್ಲಿ ಒಂದು ಚರಿತ್ರೆಯೇ.

ಇಂದಿನ ಹೊಸ ನಿರ್ದೇಶಕರನ್ನು ನೋಡಿದಾಗ ಖುಷಿಯಾಗುತ್ತದೆ. ಅವರಿಗೆ ನಾನು ಹೇಳುವುದಕ್ಕೇನೂ ಇಲ್ಲ. ಆದರೆ ಅವರು ನಿರಂತರವಾಗಿ ಚಿತ್ರರಂಗದಲ್ಲಿ ನಿಲ್ಲಬೇಕು. ನನ್ನ ಆಸೆ ಅದೇ. ನಾನು ಐವತ್ತು ಚಿತ್ರ ನಿರ್ದೇಶಿಸಿದವನು. ಇಂದಿನ ಒಬ್ಬೊಬ್ಬರೂ ಐವತ್ತು ಚಿತ್ರ ಮಾಡಲಿ ಎಂದು ನಾನು ಆಸೆ ಪಡುತ್ತೇನೆ.